ಅಧಿಕಾರಿಯನ್ನು ಏತಕ್ಕೆ ಇಸ್ಪೂ ಮುಂದುವರೆಸಿದ್ದೀರಿ ? ಸಸ್‌ಪೆನ್‌ಷನ್ ಏತಕ್ಕೆ ಮಾಡಿಲ್ಲ ? ಬೇರೆ ಕ್ರಮ ತೆಗೆದುಕೊಳ್ಳುವುದಕ್ಕೆ ಏತಕ್ಕೆ ಹಿಂದೇಟು ಹಾಕುತ್ತಿದ್ದೀರಿ? ದೇಶಪಾಂಡೆಯವರ ಸಂಬಂಧಿಕರು ಅಂತ ಹಿಂದೇಟು ಹಾಕುತ್ತಿದ್ದೀರಾ ?

ಶ್ರೀ ಜೆ. ಎಸ್. ದೇಶಮುಖ್.—ಅವರು ದೇಶಪಾಂಡೆಯವರ ಸಂಬಂಧಿ ಇರಬಹುದು ನನಗೆ ಸಂಬಂಧಿ ಅಲ್ಲ. ಅವರ ಮೇಲೆ ನಿಷ್ಪಕ್ಷಪಾತ ಕ್ರಮ ತೆಗೆದುಕೊಳ್ಳುತ್ತೇನೆ.

ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ನಷ್ಟ ಅನುಭವಿಸುತ್ತಿರುವ ಬಗ್ಗೆ.

೨೭೮. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕೈಗಾರಿಕೆ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿ ಉಕ್ಕಿನ ಕಾರ್ಖಾನೆಗೆ ಸಂಕಷ್ಟ ವಿದ್ಯುತ್ ಸರಬರಾಜು ಆಗುತ್ತಿಲ್ಲವಾದ ಕಾರಣ ನಷ್ಟ ಅನುಭವಿಸುತ್ತಿರುವುದು ನಿಜವೇ ? ಬಾಗಿದ್ದಲ್ಲಿ ಅದನ್ನು ಸರಿಪಡಿಸಲು ಕೈಗೊಂಡ ಕ್ರಮವೇನು?

ಆ) ಈ ಕೈಗಾರಿಕೆಯನ್ನು ಉಳಿಸಿ ಬೆಳೆಸಲು ಸರ್ಕಾರದವರು ಏನು ಯೋಜನೆ ಮಾಡಿದ್ದಾರೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಹೌದು, ಮಳೆಯು ಚೆನ್ನಾಗಿ ಬರುತ್ತಿರುವ ಕಾರಣ ರಾಜ್ಯದ ವಿದ್ಯುಚ್ಛಕ್ತಿ ಪರಿಸ್ಥಿತಿಯು ಉತ್ತಮಗೊಳ್ಳುವ ಸಂಭವವಿದೆ ಮತ್ತು ತತ್ಫಲವಾಗಿ ವಿದ್ಯುತ್ ಉತ್ಪಾದನೆಗೆ ಅನುಗುಣವಾಗಿ ಅಗತ್ಯ ವಿರುವಷ್ಟು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲು ಪ್ರಯತ್ನಿಸಲಾಗುತ್ತಿದೆ.

ಆ) ಕೇಂದ್ರ ಸರ್ಕಾರದ ಸುದ್ದಿವೆಯಾದ ಭಾರತೀಯ ಉಕ್ಕು ಪ್ರಾಧಿಕಾರವು ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ತೆಗೆದುಕೊಳ್ಳುವಂತೆ ಮನವೊಲಿಸಲು ಪ್ರಯತ್ನಿಸಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ೮೩ ಕೋಟಿ ರೂಪಾಯಿ ಲುಕ್ಸಾನು ಆಗಿದೆಯೆಂದು ಇತ್ತೀಚೆಗೆ ಪತ್ರಿಕೆಯಲ್ಲಿ ಬಂದಿದೆ. ಅದು ನಿಜವೇ ? ಇತ್ತೀಚೆಗೆ ಮಳೆ ಚೆನ್ನಾಗಿ ಬಂದಿರುವುದರಿಂದ ವಿದ್ಯುಚ್ಛಕ್ತಿ ಸುಧಾರಣೆ ಆಗಿದೆ. ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೀರಿ. ಭದ್ರಾವತಿ ಉಕ್ಕಿನ ಕಾರ್ಖಾನೆ ವಿದ್ಯುಚ್ಛಕ್ತಿ ಕೊರತೆಯಿಂದ ನಷ್ಟ ಅನುಭವಿಸುತ್ತಿರುವ ಸಂದರ್ಭದಲ್ಲಿ ಈ ವರ್ಷಕ್ಕೆ ಅಗತ್ಯವಾದಂತಹ ವಿದ್ಯುತ್ತನ್ನು ಸರಬರಾಜು ಮಾಡಲು ಆಶ್ವಾಸನೆ ಕೊಡುತ್ತೀರಾ ? ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಕೇಂದ್ರ ಸರ್ಕಾರ ಪ್ರಾರಂಭ ಮಾಡಿದರೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳಿದ್ದೀರಿ. ಹೆಚ್ಚಿನ ಕಾರ್ಖಾನೆ ಆದ ಇದಕ್ಕೆ ವಿದ್ಯುತ್ತನ್ನು ಒಗಿಸುತ್ತೀರಾ? ಎಂದಿನಂತಾಗಿ, ಕೇಂದ್ರ ಸರ್ಕಾರದ ಭಾರತೀಯ ಉಕ್ಕು ಪ್ರಾಧಿಕಾರಕ್ಕೆ ವಿಶ್ವೇಶ್ವರಯ್ಯ ಕೈಗಾರಿಕೆಯನ್ನು ವಹಿಸಿಕೊಳ್ಳುವಂತೆ ಮನ ಒಲಿಸಲು ಪ್ರಯತ್ನ ಮಾಡಲಾಗಿದೆ ಎಂದು ಹೇಳಿದ್ದೀರಿ. ಸಂತೋಷ. ಅಲ್ಲಿಯವರೆಗೂ ಸಷ್ಟವಾಗುವುದನ್ನು ತಪ್ಪಿಸುವುದಕ್ಕೆ ಬಿಡದೆ ಅದಕ್ಕೆ ಬೇಕಾದ ವಿದ್ಯುಚ್ಛಕ್ತಿ, ಮತ್ತು ಕಚ್ಚಾ ವಸ್ತುಗಳನ್ನು ಒಗಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆ ಇವೊತ್ತು ರೋಗಗ್ರಸ್ತ ಆಗಿರುವುದು ಕೇವಲ ವಿದ್ಯುತ್ ಕೊರತೆಯಿಂದಲ್ಲ. ವಿದ್ಯುತ್ ಕೊಡದೆ ಬಹಳಷ್ಟು ಕೆಲಸ ನಿಂತಿದೆ. ಈ ಕಾರ್ಖಾನೆ ಬಹಳ ಹಿಂದೆ ಯೋಚನೆ ಮಾಡಿ ಕಟ್ಟಿದಂತಹ ಕಾರ್ಖಾನೆ. ಆಗ ಅಪ್ಲೈ ಮಾಡಿದಂತಹ ಟೆಕ್ನಾಲಜಿ ಬಹಳಷ್ಟು ವಿದ್ಯುತ್‌ನಿಂದ ಕೆಲಸ ನಿರ್ವಹಿಸುವಂಥಾದಾಗಿದ್ದವು. ಅದಕ್ಕೆ ಸಮನಾಗಿ ಇವೊತ್ತು ವಿದ್ಯುತ್ ಸರಬರಾಜು ಮಾಡುವುದಕ್ಕಾಗುತ್ತಿಲ್ಲ. ಈ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸಬೇಕಾದರೆ ಅಲ್ಲಿರತಕ್ಕ ಟೆಕ್ನಾಲಜಿಯನ್ನೇ ಬದಲಾವಣೆ ಮಾಡಬೇಕಾಗಿರುತ್ತದೆ, ಈಗ ಇರತಕ್ಕ ಟೆಕ್ನಾಲಜಿ ಪ್ರಕಾರ ಆ ಕೈಗಾರಿಕೆಗೆ ನೂರಾ ಇಪ್ಪತ್ತು ಮೆಗಾವಾಟ್ ಪವರ್ ಕೊಡಬೇಕಾಗುತ್ತದೆ, ಅಷ್ಟು ಪವರ್ ಕೊಡುವುದಕ್ಕೆ ಸಾಧ್ಯ ಇಲ್ಲ. ಅಲ್ಲಿರತಕ್ಕ ಯಂತ್ರಗಳನ್ನು ಆಧುನೀಕರಣ ಮಾಡತಕ್ಕ ಒಂದು ಕಾರ್ಯಕ್ರಮ ಇದೆ.

ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ ಈ ತಕ್ಷಣ ಅದಕ್ಕೆ ಬೇಕಾಗುವಷ್ಟು ವಿದ್ಯುತ್ತನ್ನು ಕೊಡುತ್ತೀರಾ ಎಂಬುದು. ಅದಕ್ಕೆ ಅಷ್ಟು ಕೊಡಲು ಸಾಧ್ಯವಿಲ್ಲ. ಆದರೆ ಈಗ ಏನು ನಡೆಯುತ್ತಿದೆ ಅದು ನಿಲ್ಲದಂತೆ ನಡೆಯಲು ಎಷ್ಟು ರಿಕ್ವೈರ್‌ಮೆಂಟ್ ಬೇಕೋ ಅಷ್ಟನ್ನು ಮಿಟ್ ಮಾಡುತ್ತೇವೆ. ಇದನ್ನು ವಹಿಸಿಕೊಳ್ಳಲು ಕೇಂದ್ರದ ಸೇಲ್ ಅವರಿಗೆ ಮೊದಲು ಕೇಳಿದಾಗ ಆಗುವುದಿಲ್ಲ ಎಂದಾಗ ಕೇಂದ್ರದ ಉಕ್ಕಿನ ಮಂತ್ರಿಗಳನ್ನು ಕೇಳಿದೆವು. ಆಗ ಅವರೂ ಸಾಧ್ಯವಿಲ್ಲ ಎಂದಿದ್ದರು. ಈಗ ಮತ್ತೆ ನಾವು ಪ್ರಯತ್ನ ಮಾಡಿ ಸೇಲ್ ಅವರನ್ನು ಕನ್‌ವಿನ್ಸ್ ಮಾಡಿ ಅವರೇ ನಡೆಸುವುದು ಸೂಕ್ತ ಎಂದು ಅವರನ್ನು ಒಪ್ಪಿಸಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದುವರೆಗೆ ಲುಕ್ಸಾನಾಗಿದೆ ಎಂಬುದು ನಿಜ. ಈಗ ಅದನ್ನು ಬೇರೆಯವರಿಗೆ ವಹಿಸಬೇಕೆಂದಿರುವುದರಿಂದ ಅದರ ಅಭಿವೃದ್ಧಿ ಕಡೆ ನೀವು ಗಮನ ಕೊಡುವುದಿಲ್ಲ. ಆದರೂ ಅಲ್ಲಿಯವರೆಗೆ ಕಾಯದೆ ಆಗಿರುವುದನ್ನು ಉತ್ತಮಪಡಿಸಲು ನೀವೇಕೆ ಫ್ಯಾಕ್ಟರಿಗೆ ಹೋಗಿ ಅಲ್ಲಿನ ಉನ್ನತ ಅಧಿಕಾರಿಗಳು ಮತ್ತು ಕಾರ್ಮಿಕ ಮುಖಂಡರ ಜೊತೆ ಮಾತುಕತೆ ನಡೆಸಬಾರದು ?

ಶ್ರೀ ಜೆ. ಹೆಚ್. ಪಟೇಲ್.—ನಾನು ಪುನಃ ಹೇಳುತ್ತಿದ್ದೇನೆ. ಅಕ್ಕುಮುಲೇಟೆಡ್ ಲಾಸ್ ೮೬ ಕೋಟಿಗೆ ಏರಿದೆ. ಕೆಇಬಿಗೆ ಕೊಡುವ ಬಾಕಿಯೇ ೫೦ ಕೋಟಿ ಇದೆ. ಆದ್ದರಿಂದ ನಮ್ಮ ಸರ್ಕಾರದ ಹಣಕಾಸಿನ ಇತಿಮಿತಿಯಲ್ಲಿ ಅದನ್ನು ಪುನರುಜ್ಜೀವನಗೊಳಿಸುವುದಕ್ಕೆ ರೋಗವನ್ನು ನಿವಾರಣೆ ಮಾಡುವುದಕ್ಕೆ ನಾವು ಸೇಲ್‌ಗೆ ಮೊರೆಹೋಗಿದ್ದೇವೆ. ಈಗ ನಾವೇನು ಪ್ರಯತ್ನಿಸುತ್ತಿದ್ದೇವೆಂದರೆ ಅಲ್ಲಿನ ಕಾರ್ಮಿಕರ ಸಹಕಾರ ಮತ್ತು ಒಳ್ಳೆ ವರ್ತನೆಯಿಂದ ಫ್ಯಾಕ್ಟರಿ ನಡೆಯುತ್ತಿದೆ. ಇಲ್ಲದಿದ್ದರೆ ಮುಚ್ಚಬೇಕಾಗುತ್ತಿತ್ತು. ಆದರೂ ಆಧುನಿಕ ಉಕ್ಕಿನ ಕಾರ್ಖಾನೆಗಳ ತಂತ್ರಜ್ಞಾನವನ್ನು ಅಲ್ಲಿ ಉಪಯೋಗಿಸದಿದ್ದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಳ್ಳೆಯ ಸಿಬ್ಬಂದಿ ಎಂದು ಹೇಳಿದ್ದೀರಿ. ಬೇರೆ ಕಾರಣಗಳಿಂದ ಲುಕ್ಸಾನಾಗುತ್ತಿರಬಹುದು. ಬೇರೆಯವರಿಗೆ ವಹಿಸಿಕೊಡುವವರೆಗಾದರೂ ಅಲ್ಲಿನ ನೌಕರರಿಗೆ ಕಿರುಕುಳ ಕೊಟ್ಟು ಹೊರಗಡೆ ಕಳಿಸದಂತೆ ಉಳಿಸುವ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ನಾವು ಯಾರಿಗೂ ಕಿರುಕುಳ ಕೊಡುತ್ತಿಲ್ಲ. ಆ ಕಾರ್ಖಾನೆಯನ್ನು ಉಳಿಸಬೇಕಾದರೆ ಆಧುನಿಕ ತಂತ್ರಜ್ಞಾನ ಬಳಸಬೇಕು. ಆಗ ಆಗಿರುವ ೧೧ ಸಾವಿರ ಜನರಿಗೆ ಕೆಲಸ ಇರುವುದಿಲ್ಲ. ಆದ್ದರಿಂದ ಅವರ ಸಂಖ್ಯೆ ಕಡಿಮೆ ಮಾಡಬೇಕು. ನಾನು ಯೂನಿಯನ್ ಅವರೊಡನೆ ಕೂಡ ಮಾತುಕತೆ ನಡೆಸಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನದೇನೆಂದರೆ ಅಲ್ಲಿರುವ ನೌಕರರು ಹತ್ತಾರು ವರ್ಷಗಳಿಂದ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಅಂಥವರನ್ನು ಹೊಸ ಟೆಕ್ನಾಲಜಿ ಎಂದು ಹೇಳಿಕೊಂಡು ಮನೆಗೆ ಕಳಿಸಬೇಡಿ.

ಶ್ರೀ ಜೆ. ಹೆಚ್. ಪಟೇಲ್.—ನಿಮ್ಮ ವಿಚಾರವನ್ನು ನಾನು ಒಪ್ಪುತ್ತೇನೆ. ಆದರೆ ಕಾರ್ಮಿಕರ ಸಂಖ್ಯೆ ಕಡಿಮೆ ಮಾಡುವುದು ಅನಿವಾರ್ಯ. ಹಾಗೆ ಮಾಡುವಾಗ ಆ ಕಾರ್ಮಿಕರಿಗೆ ಪರಿಹಾರ ಕೊಡಬೇಕು. ಏನೂ ಕಿರುಕುಳವಾಗದಂತೆ ನೋಡಿಕೊಳ್ಳಿ ಎಂದಿದ್ದೀರಿ. ಆಗಲಿ.

ರಾಯಚೂರು ಶಾಖೋತ್ಪನ್ನ ವಿದ್ಯುತ್ ಕಾರ್ಯಾಗಾರ

೩೮೯. ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕಾರ್ಯಾಗಾರವನ್ನು ನಿರ್ಮಿಸಲು ಇಲ್ಲಿಯವರೆವಿಗೆ ಆಗಿರುವ ಖರ್ಚು ಎಷ್ಟು. ಈ ಘಟಕದ ನಿರ್ಮಾಣ ಪ್ರಾರಂಭವಾಗಿದ್ದು ಯಾವಾಗ, ಪ್ರಾರಂಭದಲ್ಲಿ ನಿಗದಿಪಡಿಸಿದ ಅವಧಿಯೊಳಗಾಗಿ ಈ ಯೋಜನೆಯನ್ನು ಮುಗಿಸಲಾಗಿದೆಯೇ,

ಆ) ಯೋಜನೆಯಂತೆ ಈ ಘಟಕದ ಉತ್ಪಾದನಾ ಸಾಮರ್ಥ್ಯವೆಷ್ಟು, ಹಾಗೂ ಪಾಲಿ ಉತ್ಪಾದನೆಯಾಗಬೇಕಿರುವ ವಿದ್ಯುತ್ತಿನ ಪ್ರಮಾಣ ಎಷ್ಟು,